**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**

**ಸಿ.ಸಿ.72/2025**

| | | |
|---|---|---|
| ಸಾಕ್ಷಿದಾರರ ಹೆಸರು | : ನಾಗರಾಜಯ್ಯ ಸಿ.ಹೆಚ್ | ಪ್ರಾಸಾ-1 |
| ತಂದೆಯ ಹೆಸರು | : ಹಂಪಯ್ಯ | ಚಾಸಾ-1 |
| ವಯಸ್ಸು | : 38 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಚಾಲಕ | ದಿನಾಂಕಃ 06.03.2026. |
| ವಾಸಸ್ಥಳ | : ಚನ್ನಪಟ್ಟಣ | |

**:ಮುಖ್ಯ ವಿಚಾರಣೆ ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ನ್ಯಾಯಾಲಯದ ಮುಂದಿರುವ ಆರೋಪಿಯ ಪರಿಚಯ ನನಗಿದೆ. ಮೃತ ಪ್ರಭಾಕರ್ ರವರು ನನ್ನ ಅಣ್ಣ. ಮೃತ ಹಂಪಯ್ಯ ನನ್ನ ತಂದೆ. ಮೃತ ಪ್ರೇಮ ನನ್ನ ತಾಯಿ. ಮೃತ್ಯ ಮಂಜಯ್ಯ ರವರು ನನ್ನ ಸಂಬಂಧಿಕರು. ಚಾಸಾ-18 ರಿಂದ 24 ರವರು ನನ್ನ ಸಂಬಂಧಿಕರು.

ದಿ.23.05.2024 ರಂದು ಧರ್ಮಸ್ಥಳಕ್ಕೆ ಓಮಿನಿ ಕಾರಿನ ಸಂಖ್ಯೆ KA-16-M-5731 ಮತ್ತು ಆಲ್ಟೋ ಕಾರಿನ ಸಂಖ್ಯೆ KA-16-M-6260 ರಲ್ಲಿ ಹೊರಟು ಬೆಳಗಿನ ಜಾವ 4.00 ರ ಸಮಯಕ್ಕೆ ನಾವು ಧರ್ಮಸ್ಥಳಕ್ಕೆ ಹೋಗಿ ದಿ.24.05.2024 ರಂದು ಹಿಂತಿರುಗುವಾಗ ಕೊಟ್ಟಿಗೆಹಾರದಿಂದ ಮೂರು ಕೀ.ಮೀ ಮುಂದೆ ಮ.3.20 ರ ಸಮಯದಲ್ಲಿ ಲಾರಿ ಚಾಲಕನು ಅತೀವೇಗ ಮತ್ತು ಅಜಾಗ್ರುಕತೆಯಿಂದ ಚಾಲನೆ ಮಾಡಿಕೊಂಡು ಬಂದು ಮೃತ ಪ್ರಭಾಕರ್ ರವರು ಚಾಲನೆ ಮಾಡುತ್ತಿದ್ದ ಓಮಿನಿ ಕಾರಿಗೆ ಡಿಕ್ಕಿ ಪಡಿಸಿದ ಪರಿಣಾಮ 4 ಜನರು ಸ್ಥಳದಲ್ಲಿಯೇ ಮೃತ ಪಟ್ಟಿರುತ್ತಾರೆ. ನಂತರ ತೀರ್ವ ಗಾಯಗೊಂಡ ಚಾಸಾ-18 ರಿಂದವ 21 ರವರನ್ನು ಮಂಗಳೂರಿನ ಆಸ್ಪತ್ರೆಗೆ ಕಳುಹಿಸಿಕೊಟ್ಟಿದ್ದು, ಸಾಮನ್ಯ ಸ್ವರೂಪದ ಗಾಯಾಳುಗಳಾದ ಚಾಸಾ-22 ರಿಂದ 24 ರವರನ್ನು ಇಲ್ಲಿಯೇ ಚಿಕಿತ್ಸೆ ಕೊಡಿಸಲಾಗಿರುತ್ತದೆ. ಡಿಕ್ಕಿ ಪಡಿಸಿದ ಲಾರಿಯ ಸಂಖ್ಯೆಯು KA-18-C-3646 ಆಗಿರುತ್ತದೆ. ಸದರಿ ಅಪಘಾತದಲ್ಲಿ ನನ್ನ ಎದೆಗೆ ಪೆಟ್ಟಾಗಿರುತ್ತದೆ. ನಂತರ ನಾನು ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಮೃತರ ಶವಗಳನ್ನು ನಾನು ಸ್ವೀಕರಿಸಿಕೊಂಡಿರುತ್ತೇನೆ. ನಂತರ ದಿ.05.06.2024 ರಂದು ಸಿ.ಪಿ.ಐ ಕಛೇರಿಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ. ಆ ದಿನ ಲಾರಿಯನ್ನು ಆರೋಪಿಯು ಚಾಲನೆ ಮಾಡುತ್ತಿದ್ದರು ಎಂದು ತಿಳಿದು ಬಂದಿರುತ್ತದೆ.

ಸಾಕ್ಷಿಯು ದಿ.24.05.2024 ರಂದು ನೀಡಿದ ದೂರನ್ನು ನಿಪಿ-1 ಮತ್ತು ಸಾಕ್ಷಿಯು ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶವವನ್ನು ಸ್ವೀಕರಿಸಿಕೊಂಡ ಬಾಬ್ತು ನೀಡಿದ ರಶೀದಿಯನ್ನು ನಿಪಿ-2 ರಿಂದ 5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ರಿಂದ 5(ಎ) ಎಂದು ಗುರುತಿಸಲಾಯಿತು. ನಾನು ಅಪಘಾತದ ಸಮಯದಲ್ಲಿ ಚಲಾಯಿಸುತ್ತಿದ್ದ ವಾಹನವನ್ನು ಮತ್ತು ಅಪಘಾತ ಪಡಿಸಿದ ಲಾರಿಯನ್ನು ಪುನಃ ನೋಡಿದ್ದಲ್ಲಿ ಗುರುತಿಸುತ್ತೇನೆ.

**ಪಾಟೀ ಸವಾಲು: ಆರೋಪಿ ಪರ ಶ್ರೀ ಕೆ.ಎಂ.ಪಿ. ವಕೀಲರಿಂದಃ**

ನಾನು ಕಳೆದ 10 ವರ್ಷದಿಂದ ಆಟೋ ಚಾಲಕನಾಗಿ ಕೆಲಸ ಮಾಡುತ್ತಿರುತ್ತೇನೆ. ನಾನು ನನ್ನದೇ ಸ್ವಂತ ಆಟೋವನ್ನು ಇಟ್ಟುಕೊಂಡಿರುತ್ತೇನೆ. ಆಟೋ ಚಾಲಕರಿಗೆ ಆಟೋ ಓಡಿಸಲು ಬೇರೆ ಪರವಾನಿಗೆ ಮತ್ತು 4 ಚಕ್ರ ವಾಹನವನ್ನು ಓಡಿಸಲ ಇತರೆ ಪರವಾನಿಗೆ ಇರುತ್ತದೆ ಎಂದರೆ ಸರಿ. ನನ್ನ ವಾಹನ ಪರವಾನಿಗೆಯನ್ನು ಪೋಲಿಸರು ಪಡೆದುಕೊಂಡಿರುತ್ತಾರೆ. ದಿ.23.05.2024 ರಂದು ನಾವು ಧರ್ಮಸ್ಥಳಕ್ಕೆ ಹೋಗಬೇಕು ಎಂದು ತೀರ್ಮಾನ ಮಾಡಿಕೊಂಡಿರುತ್ತೇವೆ. ನಾವು ದೇವಸ್ಥಾನವನ್ನು ಹೊರತುಪಡಿಸಿ ಇತರೆ ಸ್ಥಳಗಳಿಗೆ ಹೋಗಲು ತೀರ್ಮಾನ ಮಾಡಿರುವುದಿಲ್ಲ. ಚನ್ನಪಟ್ಟಣ ಗ್ರಾಮದಿಂದ ಧರ್ಮಸ್ಥಳಕ್ಕೆ ಅಂದಾಜು 200 ಕೀ.ಮೀ ಅಂತರವಿರುತ್ತದೆ ಎಂದರೆ ಸರಿ. ಚನ್ನಪಟ್ಟಣದಿಂದ ಧರ್ಮಸ್ಥಳಕ್ಕೆ 200 ಕ್ಕು ಹೆಚ್ಚು ಕೀ.ಮೀ. ನ ಅಂತರವಿರುತ್ತದೆ ಎಂದರೆ ಸರಿಯಲ್ಲ. ದಿ.23.05.2024 ರಂದು ರಾ.11.00 ರ ಸಮಯಕ್ಕೆ ನಾವುಗಳು ಚನ್ನಪಟ್ಟಣ ಗ್ರಾಮವನ್ನು ಬಿಟ್ಟಿರುತ್ತೇವೆ. ಆ ದಿನ ನನ್ನ ವಾಹನಕ್ಕೆ ನಾನು ಚಾಲಕ ಮತ್ತು ಮೃತ ಪ್ರಭಾಕರರು ಚಲಾಯಿಸುತ್ತಿದ್ದ ವಾಹನಕ್ಕೆ ಅವರೊಬ್ಬರೇ ಚಾಲಕರಾಗಿರುತ್ತಾರೆ ಎಂದರೆ ಸರಿ. ಅಪಘಾತ ಸಂಭವಿಸುವ ಪೂರ್ವದಲ್ಲಿ ನಾವು ಅಂದಾಜು 7 ಗಂಟೆ ಪ್ರಯಾಣ ಮಾಡಿರಬಹುದು. ಚನ್ನಪಟ್ಟಣದಿಂದ ಧರ್ಮಸ್ಥಳಕ್ಕೆ ಹೋಗುವ ಮಧ್ಯೆ 2 ರಿಂದ 3 ಬಾರಿ 10 ನಿಮಿಷಗಳ ಕಾಲ ನಿಲ್ಲಿಸಿಕೊಂಡಿರುತ್ತೇವೆ.

ಧರ್ಮಸ್ಥಳಕ್ಕೆ ಹೋಗುವಾಗ ಚಲಾಯಿಸುತ್ತಿದ್ದ ವ್ಯಕ್ತಿಗಳೇ ಹಿಂತುರುಗುವಾಗಲೂ ವಾಹವನ್ನು ಚಲಾಯಿಸುತ್ತಿದ್ದರು ಎಂದರೆ ಸರಿ. ದೇವಸ್ಥಾನಕ್ಕೆ ಹೋಗುವ ಪೂರ್ವದಲ್ಲಿ ನೇತ್ರಾವತಿ ನದಿಯಲ್ಲಿ ಸ್ನಾನ ಮಾಡಿ ನಂತರ ದೇವಸ್ಥಾನಕ್ಕೆ ಹೋಗಿರುತ್ತೇವೆ ಎಂದರೆ ಸರಿ. ನೇತ್ರಾವತಿ ಸ್ನಾನದ ಘಟ್ಟದಿಂದ ದೇವಸ್ಥಾನಕ್ಕೆ ಸುಮಾರು 2 ಕೀ.ಮೀ ಅಂತರವಿರುತ್ತದೆ. ಸದರಿ ಅಂತರವು 3 ರಿಂದ 4 ಕೀ.ಮೀ ಇರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಬೆ.7.00 ರಿಂದ 7.30 ರ ಸಮಯದಲ್ಲಿ ನಾವು ದರ್ಶನವನ್ನು ಮುಗಿಸಿಕೊಂಡಿರುತ್ತೇವೆ. ಸಾಮಾನ್ಯವಾಗಿ ಧರ್ಮಸ್ಥಳದಲ್ಲಿ ಪೂಜೆಯ ನಂತರ ಊಟವನ್ನು ನೀಡಲಾಗುತ್ತದೆ ಎಂದರೆ ಸರಿ. ಸದರಿ ಊಟವನ್ನು 1 ಗಂಟೆಯ ನಂತರ ನೀಡಲಾಗುತ್ತದೆ ಎಂದರೆ ಸಾಕ್ಷಿಯು 11.00 ಗಂಟೆಯ ನಂತರ ನೀಡಲಾಗುತ್ತದೆ ಎಂದು ನುಡಿಯುತ್ತಾರೆ. ಆ ದಿನ ನಾವು ಊಟವನ್ನು ಮುಗಿಸಿಕೊಂಡು ಮ.1.00 ಗಂಟೆಯ ಸಮಯಕ್ಕೆ ಹೊರಟಿರುತ್ತೇವೆ. ನನ್ನ ಬಳಿ ಇರುವ ಓಮಿನಿಯಲ್ಲಿ 5+1 ಜನರು ಸಂಚರಿಸಬಹುದು ಎಂದರೆ ಸಾಕ್ಷಿಯು 7+1 ಜನರು ಸಂಚರಿಸಬಹುದು ಎಂದು ನುಡಿಯುತ್ತಾರೆ. ನಾನು 5+1 ಎಂದು ಒಪ್ಪಿಕೊಂಡರೆ ನನಗೆ ತೊಂದರೆಯಾಗುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಓಮಿನಿ ವಾಹನದಲ್ಲಿ ಎಷ್ಟು ಜನರು ಸಂಚರಿಸಬಹುದು ಎಂದು ಆರ್.ಟಿ.ಓ ರವರಿಂದ ಯಾವುದೇ ವಿಶೇಷವಾದ ಪ್ರತಿಯನ್ನು ಪಡೆದುಕೊಂಡಿರುವುದಿಲ್ಲ.

ಆಲ್ಟೋ ಕಾರಿನಲ್ಲಿ 7+1 ಸಂಚರಿಸಬಹುದು ಎಂದರೆ ಸರಿ. ಧರ್ಮಸ್ಥಳಕ್ಕೆ ಹೋಗುವ ರಸ್ತೆ ಪರಿಚಯ ನನಗಿರುವುದಿಲ್ಲ ಎಂದರೆ ಸರಿಯಲ್ಲ. ಮೂಡಿಗೆರೆಯ ಕೊಟ್ಟಿಗೆಹಾರದ ಮಾರ್ಗದಲ್ಲಿ ದೇವರಮನೆಗೆ ಹೋಗುವ ರಸ್ತೆಯು ಯಾವ ದಿಕ್ಕಿಗೆ ಇದೆ ಎಂದು ನನಗೆ ತಿಳಿದಿರುವುದಿಲ್ಲ.

ಮೂಡಿಗೆರೆಯಿಂದ ಕೊಟ್ಟಿಗೆಹಾರ ಮಾರ್ಗದಲ್ಲಿ ಯಾವ ಸ್ಥಳದಲ್ಲಿ ಸೇತುವೆ ಕೆಲಸ ನಡೆಯುತ್ತಿತ್ತು ಎಂದು ಹೇಳಲಾಗುವುದಿಲ್ಲ. ಸದರಿ ಕೆಲಸ ನಡೆಯುವ ಸ್ಥಳದಲ್ಲಿ ಸಿಸಿ ಕ್ಯಾಮೆರಾವನ್ನು ಅಳವಡಿಸಿರುವ ಬಗ್ಗೆ ನನ್ನ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಕೊಟ್ಟಿಗೆಹಾರದಿಂದ ದೇವರ ಮನೆಗೆ ಹೋಗುವ ರಸ್ತೆ ಇರುವ ಸ್ಥಳದಲ್ಲಿ ರಸ್ತೆಯು ತಿರುವಿನಿಂದ ಕೂಡಿರುತ್ತದೆ ಎಂದರೆ ಸರಿ. ಸದರಿ ತಿರುವಿನ ಬಗ್ಗೆ ನನಗೆ ತಿಳಿದಿರುವುದಿಲ್ಲ. ಸದರಿ ಸ್ಥಳದಲ್ಲಿರುವ ರಸ್ತೆಯ ಅಗಲದ ಬಗ್ಗೆ ತಿಳಿದಿರುವುದಿಲ್ಲ. ಸದರಿ ರಸ್ತೆಯ ರೋಡ್ ಮಾರ್ಜಿನ್ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾನು ಹೊರಡುವ ಮುಂಚೆ ಮೃತ ಪ್ರಭಾಕರನು ದೇವಸ್ಥಾನದಿಂದ ಹೊರಟಿರುವುದಿಲ್ಲ. ನಾನು ಸ.4.30 ರಿಂದ 5.00 ರ ಸಮಯದಲ್ಲಿ ಆಸ್ಪತ್ರೆಯಲ್ಲಿ ಪೋಲಿಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಸದರಿ ಸಮಯದಲ್ಲಿ ಮಾರುತಿ ವಾಹನವದಲ್ಲಿ ಯಾರು ಎಲ್ಲಿ ಕುಳಿತಿದ್ದರು ಎಂಬುದರ ಬಗ್ಗೆ ತಿಳಿಸಿರುವುದಿಲ್ಲ. ಅದೇ ರೀತಿ ಕಾರಿನಲ್ಲೂ ಯಾರು, ಎಲ್ಲಿ ಕುಳಿತ್ತಿದ್ದರು ಎಂಬುದರ ಬಗ್ಗೆ ತಿಳಿಸಿರುವುದಿಲ್ಲ.

ನಾನು ನನ್ನ ಹೇಳಿಕೆಯಲ್ಲಿ ನಾವು ಚಲಾಯಿಸುತ್ತಿದ್ದ ವಾಹನದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ವ್ಯಕ್ತಿಗಳು ಸಂಚರಿಸುತ್ತಿದ್ದೆವು ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಸಂಭಂಧಿಕರಾದ ಮಂಜುನಾಥ್ ರವರು ಆಲ್ಟೋ ಕಾರಿನ ಮಾಲೀಕರಾಗಿರುತ್ತಾರೆ. ಅದೇ ರೀತಿ ಮೃತ ಪ್ರಭಾಕರನು ಓಮಿನಿ ಕಾರಿನ ಮಾಲೀಕರಾಗಿರುತ್ತಾರೆ. ಆ ದಿನ ನಾನು ಚಲಾಯಿಸುತ್ತಿದ್ದ ಆಲ್ಟೋ ಕಾರ್ ಮುಂದೆ ಹೋಗುತ್ತಿದ್ದ ಓಮಿನಿಯನ್ನು ಹಿಂಬಾಲಿಸುತ್ತಿತ್ತು ಎಂದರೆ ಸರಿಯಲ್ಲ. ಮೃತ ಪ್ರಭಾಕರನು ಓಮಿನಿ ವಾಹನವನ್ನು ಅತಿವೇಗ ಮತ್ತು ಅಜಾಗ್ರಕತೆಯಿಂದ ಚಲಾಯಿಸುತ್ತಿದ್ದು, ನಾನು ಅದನ್ನು ಹಿಂಬಾಲಿಸುತ್ತಿದ್ದು ನಮ್ಮ ಅಜಾಗ್ರಕತೆಯಿಂದ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಓಮಿನಿ ವಾಹನವನ್ನು ಅತಿವೇಗದಿಂದ ನಾನು ಆಲ್ಟೋ ವಾಹನದಲ್ಲಿ ಹಿಂಬಾಲಿಸುತ್ತಿದ್ದೆ ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಎದೆಯ ಭಾಗಕ್ಕೆ ಪೆಟ್ಟಾಗಿರುತ್ತದೆ. ಅದು ಕಾಣವಂತಹ ಗಾಯವಾಗಿರುವುದಿಲ್ಲ. ಸದರಿ ಅಪಘಾತದಿಂದಾಗಿ ನನ್ನ ಗಾಯವು ಕಂದಿದ ಬಣ್ಣಗೊಂಡಿರುವುದಿಲ್ಲ ಮತ್ತು ಯಾವುದೇ ರಕ್ತ ಸ್ರಾವವಾಗಿರುವುದಿಲ್ಲ. ಸದರಿ ಅಪಘಾತದಲ್ಲಿ ನನಗೆ ಯಾವುದೇ ಗಾಯವಾಗದಿದ್ದರು ಸುಳ್ಳು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸಂಭವಿಸಿದ ಸಮಯದಲ್ಲಿ ಎಷ್ಟು ಸಾರ್ವಜನಿಕರು ಸೇರಿದ್ದರು ಎಂದು ಖಚಿತವಾಗಿ ಹೇಳಲು ಸಾಧ್ಯವಿಲ್ಲ.

ಓಮಿನಿ ವಾಹನಕ್ಕೆ ಡಿಕ್ಕಿ ಪಡಿಸಿದ ನಂತರ ಸ್ಥಳದಲ್ಲಿ ಏನಾಯಿತು ಎಂದು ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತ ಸಂಭವಿಸಿದ ಸ್ವಲ್ಪ ಸಮಯದ ನಂತರ ನನಗೆ ಪ್ರಜ್ಞೆ ತಪ್ಪಿರುತ್ತದೆ. ನಂತರ ನನಗೆ ಪ್ರಜ್ಞೆ ಬಂದ ಸಮಯದಲ್ಲಿ ಆಸ್ಪತ್ರೆಯಲ್ಲಿ ಇದ್ದೆನು. ನಾನು ಆಸ್ಪತ್ರೆಗೆ ತಲುಪಿದಾಗ ಸುಮಾರು 4.00 ಗಂಟೆಯಾಗಿರಬಹುದು. ನಾನು ಆಸ್ಪತ್ರೆಗೆ ಹೋದ ಅರ್ಧ ಗಂಟೆ ಸಮಯದ ನಂತರ ಪೋಲಿಸರು ಆಸ್ಪತ್ರೆಗೆ ಬಂದಿರುತ್ತಾರೆ. ಪೋಲಿಸರು ಬರೆದುಕೊಂಡ ದೂರಿಗೆ ಮಾತ್ರ ನಾನು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ನಾನು ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಅಪಘಾತ ಸಂಭವಿಸಿದ ಸಮಯದಲ್ಲಿ ದೊಡ್ಡ ವಾಹನದ ವಿರುದ್ಧ ಪೋಲಿಸರು ದೂರನ್ನು ದಾಖಲಿಸುತ್ತಾರೆ ಎಂದರೆ ಸರಿಯಲ್ಲ. ದಿ.23.05.2024 ರಂದು

ಧರ್ಮಸ್ಥಳಕ್ಕೆ ಹೋಗಿ ದಿ.24.05.2024 ರಂದು ಮ.3.00 ರ ಸಮಯದಲ್ಲಿ ಹಿಂತಿರುಗುವಾಗ ಅಪಘಾತ ಸಂಭವಿಸಿರುತ್ತದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯಲ್ಲಿ ಮ.3.20 ರ ಸಮಯದಲ್ಲಿ ಧರ್ಮಸ್ಥಳದಿಂದ ಕೊಟ್ಟಿಗೆಹಾರದ ಮಾರ್ಗವಾಗಿ ಬರುತ್ತಿದ್ದೆವು ಎಂದು ನನ್ನ ಹೇಳಿಕೆಯಲ್ಲಿ ಹೇಳಿರುತ್ತೇನೆ. ಘಟನೆ ಸಂಭವಿಸಿದ ವೇಳೆಯ ಸಿಸಿಟಿವಿ ಫೂಟೇಜ್ ನ್ನು ಪೋಲಿಸರು ನಮಗೆ ತೋರಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಫೂಟೇಜ್ ನಲ್ಲಿ ಓಮಿನಿ ಕಾರನ್ನು ಅತಿವೇಗ ಮತ್ತು ಅಜಾಗ್ರುಕತೆಯಿಂದ ಚಲಾಯಿಸುತ್ತಿದ್ದು ಸದರಿ ಕಾರನ್ನು ಆಲ್ಟೋ ಕಾರು ಹಿಂಬಾಲಿಸುತ್ತಿರುವುದು ಕಂಡುಬಂದಿರುತ್ತದೆ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಯಲ್ಲಿ ಸುಳ್ಳು ಹೇಳಿಕೆಯನ್ನು ನೀಡಿರುತ್ತೇನೆ ಎಂದು ಪೋಲಿಸರ ತನಿಖೆಯ ಸಮಯದಲ್ಲಿ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ಸಮಯದಲ್ಲಿ ನಾನೇ ಓಮಿನಿ ಕಾರನ್ನು ಡಿಕ್ಕಿ ಪಡಿಸಿರುತ್ತೇನೆ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ಸಮಯದಲ್ಲಿ ನನ್ನ ಎದಗೆ ಪೆಟ್ಟಾಗಿತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಹೇಳಿರುವ ಅಂತಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಪೋಲಿಸರಿಗೆ ಹೇಳಿಕೆ ನೀಡಿದ ಸಮಯದಲ್ಲಿ ಎಷ್ಟು ದಾಖಲಾತಿಗಳಿಗೆ ಸಹಿ ಮಾಡಿರುತ್ತೇನೆ ಎಂದು ನೆನಪಾಗುತ್ತಿಲ್ಲ. ನಿಪಿ-2 ರಿಂದ 5 ರ ರಶೀದಿಗಳನ್ನು ಆಸ್ಪತ್ರೆಯಲ್ಲಿ ಪೋಲಿಸರೊಟ್ಟಿಗೆ ಇದ್ದ ಸಮಯದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿ.05.06.2024 ರ ಪೂರ್ವದಲ್ಲಿ ಪೋಲಿಸರು ನನಗೆ ಯಾವುದೇ ನೋಟೀಸನ್ನು ಜಾರಿ ಮಾಡಿರುವುದಿಲ್ಲ. ಮೃತ ಪ್ರಭಾಕರನು ಓಮಿನಿ ವಾಹನವನ್ನು ಅಜಾಗ್ರುಕತೆಯಿಂದ ಚಲಾಯಿಸಿ ಎಡ ಬದಿಯಲ್ಲಿ ಬರುತ್ತಿದ್ದ ಲಾರಿಗೆ ಡಿಕ್ಕಿ ಪಡಿಸಿದ ಕಾರಣ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ.

ಮೃತ ಪ್ರಭಾಕರನ ತಪ್ಪಿನಿಂದ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಪ್ರಭಾಕರನ ತಪ್ಪಿನಿಂದ ಅಪಘಾತವು ಸಂಭವಿಸಿರುತ್ತದೆ ಎಂದು ಒಪ್ಪಿದ್ದಲ್ಲಿ ನನಗೆ ತೊಂದರೆಯಾಗುತ್ತದೆ ಎಂಬ ಕಾರಣದಿಂದ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.